**ಓ ಎಸ್ 24/2023 ಪಿಡಬ್ಲ್ಯೂ.4**

**ಸಾಕ್ಷಿಯನ್ನು ದಿಃ 06.12.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ವಕೀಲರಿಂದಃ**

ವಾದಿಯ ಅಣ್ಣ ತುಳಸೀರಾಮ್ ನನ್ನ ಸಹಪಾಠಿಯಾಗಿದ್ದು ನಮ್ಮ ಮನೆಯ ಬಳಿ ವಾಸ ಮಾಡುವ ಕಾರಣ ಪರಿಚಯವಿದ್ದಾರೆ. ಈ ನಾನು ಹಾಗೂ ವಾದಿ ಮತ್ತು ವಾದಿಯ ಅಣ್ಣ ತುಳಸೀರಾಮ್ ಅನ್ಯೋನ್ಯವಾಗಿ ಚೆನ್ನಾಗಿದ್ದೇವೆ ಎಂದರೆ ವಾದಿ ಅಣ್ಣ ಹಾಗೂ ಚೆನ್ನಾಗಿದ್ದೇವೆ. ಕ್ರಯದ ಕರಾರು ಪತ್ರವನ್ನು ತಯಾರು ಮಾಡಲು 1 ನೇ ಪ್ರತಿವಾದಿಯ ಗಂಡ ನನಗೆ ಆರ್ ಟಿ ಸಿ ಯನ್ನು ಒದಗಿಸಿದ್ದರು. ದಾವಾ ಆಸ್ತಿಯು 2 ನೇ ಪ್ರತಿವಾದಿಯ ತಂದೆಯ ಸ್ವಯಾರ್ಜಿತ ಎಂಬ ಬಗ್ಗೆ ಆರ್ ಟಿ ಸಿ ಯನ್ನು ಹಾಜರುಪಡಿಸಿದ್ದರು. ದಾವಾ ಷೆಡ್ಯೂಲ್ ಸ್ವತ್ತಿನ ಮಾರಾಟದ ಮಾತುಕತೆ ಎಲ್ಲಿ ಮತ್ತು ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ, ಆದರೆ ದಸ್ತಾವೇಜನ್ನು ಬರೆಸಲು ನನ್ನ ಬಳಿ ಬಂದರು. ವಾದಿಯ ಬ್ಯಾಂಕ್ ಖಾತೆಯಿಂದ ಗೋಪಾಲಸ್ವಾಮಿರವರ ಬ್ಯಾಂಕ್ ಖಾತೆಗೆ ದಿನಾಂಕ 29.01.2018 ರಂದು ಮತ್ತು 01.02.2018 ರಂದು ಅನುಕ್ರಮವಾಗಿ ರೂ.2,40,000/- ಹಾಗೂ ರೂ.2,60,000/- ಹಣವನ್ನು ಆರ್ ಟಿ ಜಿ ಎಸ್ ಮೂಲಕ ವರ್ಗಾವಣೆ ಮಾಡುವುದಕ್ಕಿಂತ ಮೊದಲು ನನಗೆ ಆ ವಿಷಯವನ್ನು ತಿಳಿಸಿರಲಿಲ್ಲ. ಹಣ ವರ್ಗಾವಣೆಯ ಉದ್ದೇಶದ ಬಗ್ಗೆ ನನಗೆ ಖುದ್ದು ಮಾಹಿತಿ ಇರಲಿಲ್ಲ ಎಂದರೆ ಪತ್ರ ಬರೆಯುವಾಗ ನನಗೆ ತಿಳಿಸಿದ್ದರು. ವಾದಿ ಮತ್ತು ಗೋಪಾಲಸ್ವಾಮಿರವರ ನಡುವೆ ದಾವಾ ಆಸ್ತಿಯ ಮಾರಾಟಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಮಾತುಕತೆ ನಡೆಯದೆ ಇದ್ದರೂ ಸಹ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿ ಕಟ್ಟು ಕತೆಯನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ. ಹಾಗೆಯೇ ದಿನಾಂಕ 24.02.2018 ರಂದು ಗೋಪಾಲಸ್ವಾಮಿರವರು ವಾದಿಯ ಹೆಸರಿಗೆ ಕ್ರಯದ ಕರಾರು ಪತ್ರವನ್ನು ಬರೆಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಹಾಗೆಯೇ ಸದರಿ ದಿನ ವಾದಿಯು ಗೋಪಾಲಸ್ವಾಮಿರವರಿಗೆ ರೂ. 2,01,000/- ಹಣವನ್ನು

ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯದ ಕರಾರು ಪತ್ರಕ್ಕೆ ಸಾಕ್ಷಿಗಳಾಗಿ ಕೆ ಎನ್ ತುಳಸೀರಾಮ್, ಸಿ ನಾರಾಯಣಗೌಡ ಮತ್ತು ದೇವೇಗೌಡರ ಸಮಕ್ಷಮ ಕ್ರಯದ ಮಾತುಕತೆಯಾಗಲೀ, ಹಣ ಸಂದಾಯವಾಗಲೀ ಅಥವಾ ದಸ್ತಾವೇಜು ಬರೆಯುವುದಾಗಲೀ ನಡೆದಿಲ್ಲ ಎಂದರೆ ಸರಿಯಲ್ಲ. ದಿನಾಂಕ 19.09.2019 ರಂದು ಗೋಪಾಲಸ್ವಾಮಿರವರು ಕಾರಣಾಂತರಗಳಿಂದ ಕ್ರಯಪತ್ರ ನೋಂದಣಿ ಮಾಡಿಸಿಕೊಡಲಾಗದಿದ್ದ ಕಾರಣ ವಾದಿಯ ಹೆಸರಿಗೆ ಪೂರಕ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಗೋಪಾಲಸ್ವಾಮಿರವರು ತಮ್ಮ ವೈಯಕ್ತಿಕ ಕಾರಣಗಳಿಗಾಗಿ ವಾದಿಯಿಂದ ಆರ್ ಟಿ ಜಿ ಎಸ್ ಮೂಲಕ ಹಣವನ್ನು ಸಾಲವಾಗಿ ಪಡೆದುಕೊಂಡಿದ್ದಾರೆಯೇ ಹೊರತು ದಾವಾ ಆಸ್ತಿಯ ಮಾರಾಟದ ಉದ್ದೇಶಕ್ಕೆ ಅಲ್ಲ ಎಂದರೆ ಸರಿಯಲ್ಲ. ಗೋಪಾಲಸ್ವಾಮಿರವರು ವಾದಿಯಿಂದ ಆರ್ ಟಿ ಜಿ ಎಸ್ ಮೂಲಕ ಹಣ ಪಡೆದುಕೊಂಡ ಹಣದ ಭದ್ರತೆಗೆ ವಾದಿಯು ಗೋಪಾಲಸ್ವಾಮಿರವರಿಂದ ಕೆಲವೊಂದು ಖಾಲಿ ಹಾಳೆಗಳಿಗೆ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ವಾದಿಯಿಂದ ಆರ್ ಟಿ ಜಿ ಎಸ್ ಮೂಲಕ ಪಡೆದುಕೊಂಡಿದ್ದ ಹಣವನ್ನು ಗೋಪಾಲಸ್ವಾಮಿರವರು ತಾವು ಬದುಕಿದ್ದಾಗಲೇ ವಾದಿಗೆ ತೀರುವಳಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಗೋಪಾಲಸ್ವಾಮಿರವರು ತೀರಿಕೊಂಡ ನಂತರ ನನ್ನ ಸ್ನೇಹಿತರಾದ ತುಳಸೀರಾಮ್ ರವರ ತಂಗಿಯಾದ ವಾದಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಖಾಲಿ ಹಾಳೆಗಳ ಮೇಲೆ ಗೋಪಾಲಸ್ವಾಮಿರವರು ಮಾಡಿದ್ದ ಸಹಿಯನ್ನು ಗೋಪಾಲಸ್ವಾಮಿರವರು ತೀರಿಕೊಂಡ ನಂತರ ದುರುಪಯೋಗಪಡಿಸಿಕೊಂಡು ನಿಶಾನೆ ಪಿ 1 ಮತ್ತು 2 ರಲ್ಲಿನ ಕ್ರಯದ ಕರಾರು ಪತ್ರ ಹಾಗೂ ಪೂರಕ ಕ್ರಯದ ಕರಾರು ಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಶಾನೆ ಪಿ 1 ಮತ್ತು 2 ರಲ್ಲಿನ ದಾಖಲೆಗಳನ್ನು ವಾದಿ ಮತ್ತು ಅವರ ಅಣ್ಣ ತುಳಸೀರಾಮ್ ರವರು ನೀಡಿದ

ಮಾಹಿತಿ  ಮೇರೆಗೆ ಸಿದ್ದಪಡಿಸಿದ್ದೆನೆಯೇ ಹೊರತು ಮೃತ ಗೋಪಾಲಸ್ವಾಮಿರವರು ನೀಡಿದ ಸಂಗತಿಗಳ ಆಧಾರದ ಮೇಲೆ ತಯಾರು ಮಾಡಿಲ್ಲ ಎಂದರೆ ಸರಿಯಲ್ಲ. ಗೋಪಾಲಸ್ವಾಮಿರವರು ಯಾವತ್ತೂ ಸಹ ನನ್ನ ಕಚೇರಿಗೆ ಬಂದಿಲ್ಲ ಎಂದರೆ ಸರಿಯಲ್ಲ.  ನನ್ನ  ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಿನ ಸಂಗತಿಗಳನ್ನು ವಾದಿ ಮತ್ತು ಅವರ ಅಣ್ಣ ತುಳಸೀರಾಮ್ ರವರು ನೀಡಿದ ಮಾಹಿತಿ  ಮೇಲೆ ತಯಾರು ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ದಾವಾ ಆಸ್ತಿಯನ್ನು ವಾದಿ ದಕ್ಕಿಸಿಕೊಳ್ಳಲಿ ಎಂಬ ಉದ್ದೇಶದಿಂದ ವಾದಿ ಮತ್ತು ಅವರ ಅಣ್ಣ ತುಳಸೀರಾಮ್ ರವರ ಕೋರಿಕೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ, ವಾದಿಯ ಅಣ್ಣ ಹಾಗೂ ನಾನು ನಿಶಾನೆ ಪಿ1 ಮತ್ತು 2 ರಲ್ಲಿರುವ ದಾಖಲೆಗಳನ್ನು ಸೃಷ್ಟಿ ಮಾಡಿರುವ ಕಾರಣ ಪ್ರತಿವಾದಿಗಳು ವಾದಿಗೆ ಯಾವುದೇ ಕ್ರಯಪತ್ರ ಬರೆದುಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ವಾದಿಯು ವಾಸ್ತವ ಸಂಗತಿಗಳನ್ನು ಮುಚ್ಚಿಟ್ಟು ಸೃಷ್ಟಿತ ದಾಖಲೆಗಳ ಆಧಾರದ ಮೇಲೆ ಈ ದಾವೆ ಹೂಡಿರುವ ಕಾರಣ ವಾದಿಯೂ ಸಹ ಯಾವುದೇ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ  ಕೆ ಎಂ ಆರ್ ವಕೀಲರಿಂದಃ**

ನಾನು ಪತ್ರ ಬರಹಗಾರನಾಗಿ ಸುಮಾರು 13–14 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದೇನೆ. ನಾನು ಕ್ರಯದ ಕರಾರು ಪತ್ರವನ್ನು ಸಿದ್ದಪಡಿಸುವಾಗ ಉದ್ದೇಶಿತ ಮಾರಾಟಗಾರನಿಗೆ ಆ ಸ್ವತ್ತು ಯಾವ ರೀತಿಯಲ್ಲಿ  ಬಂದಿತ್ತು ಎಂಬುದನ್ನು ಪತ್ರದಲ್ಲಿ ನಮೂದು ಮಾಡುತ್ತೇನೆ ಎಂದರೆ ಸಾಮಾನ್ಯವಾಗಿ ಅವರು ನೀಡುವ ಮಾಹಿತಿಯ ಆಧಾರದ ಮೇಲೆ ನಾನು ನಮೂದು ಮಾಡುತ್ತೇನೆ. ಒಂದೊಮ್ಮೆ ಕ್ರಯಪತ್ರದ ಮೂಲಕ ಆ ಸ್ವತನ್ನು ಅವರು ಕೊಂಡುಕೊಂಡಿದ್ದರೆ ಆ ಕ್ರಯಪತ್ರವನ್ನು ನನಗೆ ನೀಡಿದಾಗ ನಾನು ಅದನ್ನು ಕರಾರು ಪತ್ರದಲ್ಲಿ ನಮೂದು ಮಾಡುತ್ತೇನೆ.

ಗೋಪಾಲಸ್ವಾಮಿರವರು ವಿದ್ಯಾವಂತರು ಎಂದರೆ ಸರಿ. ಆ ಕಾರಣದಿಂದ ದಾವಾ ಆಸ್ತಿಯು ಗೋಪಾಲಸ್ವಾಮಿರವರಿಗೆ ಹೇಗೆ ಬಂದಿತ್ತು ಎಂಬ ಸಂಪೂರ್ಣ ಮಾಹಿತಿ ಅವರಿಗೆ ಇತ್ತು ಎಂದರೆ ಸರಿ. ಗೋಪಾಲಸ್ವಾಮಿರವರಿಗೆ ದಾವಾ ಆಸ್ತಿಯು ಯಾವ ಪತ್ರದ ಮೂಲಕ ಬಂದಿತ್ತು ಎಂಬ ಸಂಗತಿಯು ನಿಶಾನೆ ಪಿ 1 ಮತ್ತು 2 ರಲ್ಲಿ ನಮೂದು ಆಗಿಲ್ಲ ಎಂದರೆ ಸರಿ. ಕ್ರಯದ ಕರಾರು ಪತ್ರದಲ್ಲಿ ಪಡೆದುಕೊಂಡಿರುವ ಹಣಕ್ಕಿಂತ ಹೆಚ್ಚುವರಿಯಾಗಿ ಹಣವನ್ನು ಪಡೆದುಕೊಂಡು ಪೂರಕ ಕರಾರು ಪತ್ರ ಬರೆದುಕೊಡುವಾಗ ಆ ಹಾಗೆ ಹೆಚ್ಚುವರಿ ಹಣವನ್ನು ಯಾವ ಉದ್ದೇಶಕ್ಕಾಗಿ ಪಡೆದುಕೊಳ್ಳಲಾಯಿತು ಎಂಬ ಬಗ್ಗೆ ಪೂರಕ ಕ್ರಯದ ಕರಾರು ಪತ್ರದಲ್ಲಿ ನಮೂದಿಸುತ್ತೇವೆ ಎಂದರೆ ಸರಿ. ಮೂಲ ಕ್ರಯದ ಕರಾರು ಪತ್ರದ ಅನುಸಾರ ಕ್ರಯ ಪತ್ರವನ್ನು ಏಕೆ ಬರೆದುಕೊಡಲು ಆಗಲಿಲ್ಲ ಎಂಬುದನ್ನು ಪೂರಕ ಕ್ರಯದ ಕರಾರು ಪತ್ರದಲ್ಲಿ ನಮೂದು ಮಾಡಿದೆ. ಮೂಲ ಕ್ರಯದ ಕರಾರು ಪತ್ರ ಆದ ನಂತರ ವಾದಿಯಿಂದ ಗೋಪಾಲಸ್ವಾಮಿರವರು ನಗದು ರೂಪದಲ್ಲಿ ರೂ.1 ಲಕ್ಷ ಪಡೆದುಕೊಂಡಿದ್ದಾರೆ ಎಂಬ ಸಂಗತಿಯನ್ನು ನಿಶಾನೆ ಪಿ 2 ರಲ್ಲಿನ ಪೂರಕ ಕ್ರಯದ ಕರಾರು ಪತ್ರದಲ್ಲಿ ನಮೂದು ಮಾಡಿದೆ ಎಂದರೆ ಸರಿ. ಹೆಚ್ಚುವರಿಯಾಗಿ ರೂ. 1 ಲಕ್ಷ ನಗದು ಹಣವನ್ನು ಏಕೆ ಪಡೆದುಕೊಳ್ಳಲಾಯಿತು ಎಂಬುದನ್ನು ನಿಶಾನೆ ಪಿ 2 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಪೂರಕ ಕ್ರಯದ ಕರಾರು ಪತ್ರವನ್ನು ಆ ಕಾರಣಕ್ಕಾಗಿಯೇ ಬರೆದುಕೊಟ್ಟ ಕಾರಣ ನಿರ್ದಿಷ್ಟವಾಗಿ ಉದ್ದೇಶವನ್ನು ನಮೂದು ಮಾಡುವ ಅವಶ್ಯಕತೆ ಇಲ್ಲ ಎಂದು ಹೇಳುತ್ತಾರೆ. ಹಾಗೆ ಪೂರಕ ಕರಾರು ಪತ್ರಗಳಲ್ಲಿ ಉದೇಶವನ್ನು ನಮೂದು ಮಾಡಬಾರದು ಎಂಬ ನಿಯಮ ಇಲ್ಲ.

ಗೋಪಾಲಸ್ವಾಮಿರವರು ಬದುಕಿದ್ದಾಗ ವಾದಿಯಿಂದ ಆರ್ ಟಿ ಜಿ ಎಸ್ ಮೂಲಕ ಹಣ ಪಡೆದುಕೊಂಡಿದ್ದ ಕಾರಣ ವಾದಿಯು ಗೋಪಾಲಸ್ವಾಮಿರವರಿಂದ ಖಾಲಿ ಹಾಳೆಗಳಿಗೆ ಸಹಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ನಿಶಾನೆ ಪಿ 1

ಮತ್ತು 2 ರಲ್ಲಿ ನಮೂದು ಮಾಡಿರುವ ನಗದು ರೂಪದ ಹಣವನ್ನು ಗೋಪಾಲಸ್ವಾಮಿರವರು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ತನ್ನ ಸಮಕ್ಷಮವೇ ಗೋಪಾಲಸ್ವಾಮಿರವರು ಹಣ ಪಡೆದುಕೊಂಡಿದ್ದಾಗಿ ಒಪ್ಪಿಕೊಂಡರು ಎಂದು ಹೇಳುತ್ತಾರೆ. ಹಣ ಪಡೆದುಕೊಂಡ ಸಂಗತಿಯನ್ನು ಹಾಗೆ ಒಪ್ಪಿಕೊಂಡ ವಿಷಯವನ್ನು ಸದರಿ ಪತ್ರಗಳಲ್ಲಿ ನಮೂದು ಮಾಡಿದ್ದೇನೆ. ನಾನು ಪತ್ರ ಬರೆಯುವ ಸಮಯದಲ್ಲಿ ವಾದಿಯು ಮೃತ ಗೋಪಾಲಸ್ವಾಮಿರವರಿಗೆ ನಗದು ರೂಪದಲ್ಲಿ ಯಾವುದೇ ಹಣವನ್ನು ನನ್ನ ಸಮಕ್ಷಮ ನೀಡಿಲ್ಲ ಎಂದರೆ ಸರಿಯಲ್ಲ. ವಾದಿಯು ಮೃತ ಗೋಪಾಲಸ್ವಾಮಿರವರಿಗೆ ರೂ.1 ಲಕ್ಷ ಹಣವನ್ನು  ನಗದು ರೂಪದಲ್ಲಿ ಕೊಟ್ಟರು ಎಂದು ಗೋಪಾಲಸ್ವಾಮಿರವರು ನನಗೆ ಹೇಳಿದರು ಎಂಬ ಸಂಗತಿ ನಿಜವೋ ಅಥವಾ ನನ್ನ ಸಮಕ್ಷಮ ವಾದಿಯು ಗೋಪಾಲಸ್ವಾಮಿರವರಿಗೆ ರೂ. 1 ಲಕ್ಷ  ನಗದು ಹಣವನ್ನು  ನೀಡಿದರು ಎಂಬುದು ಸರಿಯೋ ಎಂದರೆ ಎರಡೂ ಸರಿ. ಗೋಪಾಲಸ್ವಾಮಿರವರ ಸಮಕ್ಷಮ ನಿ ಪಿ 1 ಮತ್ತು 2 ರ ರೀತ್ಯಾ ಯಾವುದೇ ವ್ಯವಹಾರ ಮತ್ತು ಪ್ರತಿಪಲ ನೀಡುವುದಾಗಲೀ ನಡೆಯದೆ ಇರುವ ಕಾರಣ ನಾನು ದ್ವಂದ್ವ ಹೇಳಿಕೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಗೋಪಾಲಸ್ವಾಮಿರವರು ವಿದ್ಯಾವಂತರಾಗಿರುವ ಕಾರಣ ಒಂದೊಮ್ಮೆ ನಿಶಾನೆ ಪಿ1 ಮತ್ತು 2 ನ್ನು ಅವರೇ ಬರೆಸಿದ್ದರೆ ದಾವಾ ಆಸ್ತಿಯು ಅವರಿಗೆ ಹೇಗೆ ಬಂತು ಎಂದು ಬರೆಸುತ್ತಿದ್ದರು ಎಂದರೆ ಸರಿಯಲ್ಲ.

ಗೋಪಾಲಸ್ವಾಮಿರವರು ವಾದಿಯಿಂದ ಆರ್ ಟಿ ಜಿ ಎಸ್ ಮೂಲಕ ಹಣವನ್ನು ಸಾಲವಾಗಿ ಪಡೆದುಕೊಂಡಾಗ ವಾದಿಯು ಆ ಹಣದ ಭದ್ರತೆಗಾಗಿ ಗೋಪಾಲಸ್ವಾಮಿರವರಿಂದ ಸಹಿ ಮಾಡಿಸಿಕೊಂಡಿದ್ದ ಖಾಲಿ ಹಾಳೆಗಳನ್ನು ದುರುಪಯೋಗಪಡಿಸಿಕೊಂಡು ವಾದಿ, ನಾನು  ಮತ್ತು ಇತರೆ ಸಾಕ್ಷಿದಾರರು ನಿ ಪಿ 1 ಮತ್ತು 2 ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಶಾನೆ ಪಿ 1 ಮತ್ತು 2 ಸೃಷ್ಟಿತ

ಪತ್ರಗಳಾಗಿರುವ ಕಾರಣ ಗೋಪಾಲಸ್ವಾಮಿರವರು ಬದುಕಿದ್ದಾಗ ಕ್ರಯಪತ್ರವನ್ನು ಬರೆದು ಕೊಡುವಂತೆ ವಾದಿಯು ಗೋಪಾಲಸ್ವಾಮಿರವರ ಬಳಿ ಲಿಖಿತ ರೂಪದಲ್ಲಿ ಯಾವುದೇ ಬೇಡಿಕೆ ಇಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಯ ಜೊತೆ ಷರೀಕ್ಕಾಗಿ ಸುಳ್ಳು ಪತ್ರಗಳನ್ನು ಸೃಷ್ಟಿ ಮಾಡಿರುವುದಲ್ಲದೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**